ಕಾದು ಅವಳು ಪ್ರಸಾದಕ್ಕೆ ಬರುವ ಗುಟ್ಟನ್ನು ಕಂಡುಕೊಂಡಿದ್ದರು. ಕೊನೆಗೂ ಈ ಮಾತು ಶಾಸ್ತ್ರಿಗಳ ಕಿವಿದೆರೆಯವರೆಗೆ ಬಂದೇ ಬಂತು. ಅವರ ಆಪ್ತರೊಬ್ಬರು ಏಕಾಂತ ಸಾಧಿಸಿ ಶಾಸ್ತ್ರಿಗಳ ಕಿವಿ ಕಚ್ಚಿದರು.

"ಮೊದಲು ಅದನ್ನ ಕೆಲಸದಿಂದ ಕಿತ್ತು ಬಿಸಾಕಿ ಮಾರೆರಾ, ಸರಿಯಿಲ್ಲ ಅದು..."

"ಯಾರನ್ನ?" ಶಾಸ್ತ್ರಿಗಳಿಗೆ ಹಿಂದು ಮುಂದು ಗೊತ್ತಿಲ್ಲ.

"ಅದೇ, ಸುತ್ತುಕೆಲಸಕ್ಕೆ ಬರುತ್ತಲ್ಲ ಅದು..."

"ಕಮಿಟಿಯೋರು ಗೊತ್ತು ಮಾಡಿರೋದು. ನಂಗೂ, ಅದಕ್ಕೂ ಸಂಬಂಧ ಇಲ್ಲ..."

"ನಿಮಗೆ ಸಂಬಂಧ ಇಲ್ಲ, ಒಪ್ಗಂತೀವಿ. ಆದರೆ, ಸಣ್ಣ ಶಾಸ್ತ್ರಿಗಳು..."

ಝುಗ್ ಅಂದಿತ್ತು ಶಾಸ್ತ್ರಿಗಳ ಎದೆ. ಆದರೆ, ಅಷ್ಟು ಸುಲಭಕ್ಕೆ ಶಾಸ್ತ್ರಿಗಳು ಮಗನನ್ನು ಬಿಟ್ಟುಕೊಟ್ಟಿರಲಿಲ್ಲ. ಅವರಿಗೇ ನಂಬಿಕೆ ಬರದ ಮಾತು ಅಂದ ಮೇಲೆ ಹೇಗೆ ಬಿಟ್ಟು ಕೊಡುತ್ತಾರೆ?

"ನಾಲಿಗೆಗೆ ಎಲುಬಿಲ್ಲ..." ಎಂದಷ್ಟೇ ಹೇಳಿ ಉಗುಳು ನುಂಗಿಕೊಂಡಿದ್ದರು. ಮರುದಿನ ಹೂ ಕುಯ್ಯುವ ಹೆಳೆ ಮಾಡಿಕೊಂಡು, ಕೈಲೊಂದು ಬಿದಿರಿನ ಬುಟ್ಟಿ ಹಿಡಿದು, ಮಗನಿಗೆ ಗೊತ್ತಾಗದಂತೆ ಪತ್ತೆದಾರಿಕೆಗೆ ಹೊರಟಿದ್ದರು ಶಾಸ್ತ್ರಿಗಳು. ಸುತ್ತಮುತ್ತ ಮತ್ಯಾರಿರಲಿಲ್ಲ. ಬೆಳಬೆಳಗ್ಗೆ ಮಾಡುವ ಕೆಲಸ ಬಿಟ್ಟು ಯಾರು ಬರುತ್ತಾರೆ? ಅವರು ಗುಡಿಯ ಹತ್ತಿರ ಬರುವಾಗ ಮಗ ಅವಳ ಜೊತೆ ಗುಡಿಯ ಸುತ್ತುಕಟ್ಟೆಯ ಮೇಲೆ ಕೂತು ತಾಂಬೂಲಚರ್ವಣದ ಕಲಾಪ ನಡೆಸುತ್ತಿದ್ದ. ಹೊತ್ತಲ್ಲದ ಹೊತ್ತಲ್ಲಿ, ಕೆಲವೊಮ್ಮೆ ಅರ್ಧರಾತ್ರಿಯಲ್ಲಿ ಕೂಡಾ ಗಿರ ಹತ್ತಿದಾಗ ಎದ್ದು ಕವಳ ಕಟ್ಟುವುದು ಮಲೆನಾಡ ಪ್ರಾಂತ್ಯದಲ್ಲಿ ಹೊಸ ವಿಷಯವೇನಲ್ಲ. ಅದ್ಯಾವ ಕೆಟ್ಟ ಗಳಿಗೆಯಲ್ಲಿ ಶಾಸ್ತ್ರಿಗಳು ಎದ್ದು ಬಂದಿದ್ದರೋ, ಮೊದಲ ನೋಟದಲ್ಲೇ ಸತ್ಯದರ್ಶನವಾಗಿತ್ತು. ಅವರು ನಂಬಿಕೊಂಡಿದ್ದ, ನೆಚ್ಚಿಕೊಂಡಿದ್ದ ಮಗ ತಾಂಬೂಲದ ಸುರುಳಿಯನ್ನು ಅವಳ ಬಾಯಿಗಿಟ್ಟಿದ್ದನ್ನು ಕಣ್ಣಾರೆ ಕಂಡ ಅವರಿಗೆ ಕಣ್ಣು ಕತ್ತಲೆ ಬಂದಂತಾಗಿತ್ತು. 'ಶಿವ... ಶಿವಾ...' ಎನ್ನುವ ಉದ್ಗಾರ ಬಾಯಿಂದ ಹೊರಬಿದ್ದಿತ್ತು. ಸುಳಿವೇ ಕೊಡದೆ ಬಂದಿದ್ದ ಅಪ್ಪನನ್ನು ಕಂಡು ಮಗ ದಂಗು ಬಡಿದಿದ್ದ. ಶಾಸ್ತ್ರಿಗಳು ಹೇಳಿದ್ದು ಒಂದೇ ಮಾತು.



"ಜನರಿಗೆ ಹೆದರದಿದ್ರೆ ಬೇಡ, ದೇವರ ಹೆದರಿಕೇನೂ ಬೇಡ್ವಾ?"

"ನೀನೊಬ್ಬ. ಏನಾಯ್ತು ಈಗ? ನೀ ಅಂದುಕೊಂಡ್ಹಂಗೆ ಏನೂ ಇಲ್ಲ. ಹಿಡಿಕುಂಟೆ ಹಿಡ್ಕೊಂಡು ಕಸ ಗುಡಿಸ್ತಿದ್ಲಲ್ಲ, ಕೈಯೆಲ್ಲಾ ಕೊಳೆ ಆಗಿತ್ತು. ಅದಕ್ಕೇ..."

ಅಪ್ಪನ ಬಾಯಿ ಬಡಿದಿದ್ದ ವಿಶ್ವೇಶ್ವರ. ಮನೆಗೆ ಬಂದ ಶಾಸ್ತ್ರಿಗಳು ಸ್ನಾನಕ್ಕೂ ಎದ್ದಿರಲಿಲ್ಲ, ತಿಂಡಿಗೂ ಬಂದಿರಲಿಲ್ಲ. ಕೆಳ ಜಗುಲಿಗೆ ಕಾಲಿಳಿಬಿಟ್ಟುಕೊಂಡು ಮುಂಚೇಕಡೆಯ ಮುಂಡಿಗೆ ಕಂಬಕ್ಕೆ ವರಗಿ ಕೂತವರು ಹಾಗೇ ಕೂತುಬಿಟ್ಟಿದ್ದರು.

"ಇವತ್ತೇನು ಸ್ನಾನ, ಸಂಧ್ಯಾವಂದನೆ, ದೇವರಪೂಜೆ ಒಂದೂ ಇಲ್ವಾ? ಕೂತಲ್ಲೇ ಕುಗುರ್ತಿದೀರಾ?" ಒಂದಷ್ಟು ಹೊತ್ತಿನ ಮೇಲೆ ಹೆಂಡತಿ ಹತ್ತಿರ ಬಂದು ಅಲುಗಿಸಿದರೆ ಹಾಗೇ ಪಕ್ಕಕ್ಕೆ ಉರುಳಿಕೊಂಡಿತ್ತು ದೇಹ. ಪ್ರಾಣಪಕ್ಷಿ ಯಾವ ಮಾಯದಲ್ಲೋ ಗೂಡು ಬಿಟ್ಟಿತ್ತು. ಅಪ್ಪ ಯಾಕೆ ಎದೆ ಒಡೆದುಕೊಂಡರು ಎನ್ನುವ ಸತ್ಯ ಗೊತ್ತಾಗಿದ್ದು ಮಗನಿಗೆ ಮಾತ್ರಾ. ಹೆಚ್ಚೆಂದರೆ ಕೆಲಸದ ಹೆಣ್ಣಿಗೆ. 'ಅವನ ಆಯುಷ್ಯ ಇದ್ದಿದ್ದೇ ಇಷ್ಟು' ಎಂದು ಸಮಾಧಾನ ಹಚ್ಚಿಕೊಂಡು ವಿಶ್ವೇಶ್ವರ ಮುಂದಿನ ಕ್ರಿಯಾಕರ್ಮಗಳಿಗೆ ಮಾನಸಿಕವಾಗಿ, ದೈಹಿಕವಾಗಿ ಸಿದ್ಧಗೊಂಡ.

★★★

ಸೂತಕದ ದಿನಗಳು ಕಳೆಯುವವರೆಗೆ ತತ್ಕಾಲಕ್ಕೆಂದು ಪೂಜೆಗೆ ನೇಮಿಸಿದ್ದ ಗಣಪತಿ ದೇವಸ್ಥಾನದ ಅರ್ಚಕರ ಸೇವೆ ಅನಂತರದ ದಿನಗಳಿಗೂ ಮುಂದುವರಿಸಲ್ಪಟ್ಟಿತು. ಪ್ರಸಾದ ನಿರ್ವಹಣೆಯ ಹೊಣೆ ಕೂಡಾ ಹೊಸ ಅರ್ಚಕರ ಹೆಗಲಿಗೆ ಬಿದ್ದಿತ್ತು. 'ತಾನೇನು ಅಂತಾ ಮಹಾಪರಾಧ ಮಾಡಿಲ್ಲ.